# ದಾಸ ಸಾಹಿತ್ಯಕ್ಕೆ ದೇಶೀಯತೆ ಸ್ಪರ್ಶ ನೀಡಿದ ಪ್ರಸನ್ನವೆಂಕಟದಾಸರು

■ ಸುಶೀಲೇಂದ್ರ ಕುಂದರಗಿ

**ಬೆಂಗಳೂರು, ಬಾಗಲಕೋಟೆ ನವನಗರ, ಬಾದಾಮಿ, ಧಾರವಾಡ, ಸೇರಿದಂತೆ ರಾಜ್ಯದ ವಿವಿಧೆಡೆಗಳಲ್ಲಿ ದಿ. 17 ರಿಂದ 20 ರವರೆಗೆ ಶ್ರೀ ಪ್ರಸನ್ವೆಂಕಟ ದಾಸರ ಆರಾಧನಾ ಮಹೋತ್ಸವ ಜರುಗುತ್ತಲಿದೆ ತನ್ನಿಮಿತ್ತ ಈ ಲೇಖನ**

ಕನ್ನಡ ಸಾಹಿತ್ಯದ ಮಧ್ಯಯುಗದ ಕಾಲ ಘಟ್ಟದಲ್ಲಿ ದಾಸ ಸಾಹಿತ್ಯ ಉತ್ತುಂಗದ ಶಿಖರಕ್ಕೇರಿದ ಸಂದರ್ಭ. ಆಧ್ಯಾತ್ಮಿಕತೆ ಒಳ ಹೂರಣವನ್ನಿಟ್ಟುಕೊಂಡೇ ಜನಸಾಮಾನ್ಯನಿಗೂ ವೈದಿಕ ಜ್ಞಾನ ನೀಡುವ ಮೂಲಕ ಬೆಳೆದು ಬಂದ ದಾಸ ಪರಂಪರೆ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅನನ್ಯ.

'ಹರಿಕಥಾಮೃತಸಾರ'ದ ಮಾನ್ವಿ ಜಗನ್ನಾಥದಾಸರ ಸಮಕಾಲೀನರಾಗಿದ್ದ ಬಾಗಲಕೋಟೆಯ ಶ್ರೀ ಪ್ರಸನ್ನವೆಂಕಟದಾಸರೂ ಕೂಡಾ ತಿರುಪತಿ ವೆಂಕಟೇಶನ ಅಂತರಂಗದ ಭಕ್ತರಾಗಿದ್ದುಕೊಂಡೇ ದೇಶಿಯ ಗತ್ತಿನ ತಂತ್ರಗಾರಿಕೆಯ ಧಾಟಿಯಲ್ಲಿ ಕೀರ್ತನೆಗಳನ್ನು ರಚನೆ ಮಾಡುವ ಮೂಲಕ ವಿಭಿನ್ನರೆನಿಸಿದ್ದಾರೆ.

ಬಾಗಲಕೋಟೆ ಕಿಲ್ಲಾ ವೈದಿಕ ಶಿಕ್ಷಣದ ಅಗ್ರಹಾರವಾಗಿದ್ದರೂ ಕೂಡಾ ದೇಶ ಕಾಲದ ಸ್ಥಿತ್ಯಂತರ ಮತ್ತು ಬದುಕು ಬವಣೆಗಳ ನಡುವೆ ಪ್ರಸನ್ವೆಂಕಟರಿಗೆ ಬಾಲ್ಯದಲ್ಲಿ ಶಿಕ್ಷಣ ದೊರೆಯಲಿಲ್ಲ. ದನಗಾಹಿಯಾಗಿದ್ದ ಅಜ್ಞಾನ ದೇಶಿಗನೊಬ್ಬ ಬದುಕಿನಲ್ಲಿ ದೈವಿ ಸಾಕ್ಷಾತ್ಕಾರಕ್ಕಾಗಿ ಹಂಬಲಿಸಿ ಭವದ ಕ್ಲೇಷಗಳಿಂದ ಪಾರಾಗಲು ಹವಣಿಸುತ್ತ ಅಲೆಯುತ್ತ ಭಗವಂತನ ಸಾಕ್ಷಾತ್ಕಾರ ಪಡೆದವರು.

ಯಾವುದೋ ಸನ್ನಿವೇಶದಲ್ಲಿ ಕಾಖಂಡಕಿಯಿಂದ ಬಾಗಲಕೋಟೆಗೆ ಆಗಮಿಸಿದ ಅವರ ಹಿರಿಯರು ಬಾಗಲಕೋಟೆ ಕಿಲ್ಲೆಯಲ್ಲಿಯೇ ವಾಸವಾಗುತ್ತಾರೆ. ಈ ಮನೆತನದ ನರಸಪ್ಪಯ್ಯ ಹಾಗೂ ಲಕ್ಷ್ಮೀದೇವಿ ಇವರ ಗರ್ಭದಲ್ಲಿ 1680 ರಲ್ಲಿ ವೆಂಕಣ್ಣ ಜನಿಸಿದರು. ತಂದೆ ತಾಯಿ ತೀರಿ ಹೋದಾಗ ವೆಂಕಣ್ಣ ಇನ್ನೂ ಬಾಲಕ. ವೆಂಕಣ್ಣನ ಭಾರವನ್ನು ಹಿರಿಯ ಮಗ ರಾಘವೇಂದ್ರರಿಗೆ ಒಪ್ಪಿಸಿ ಪ್ರಾಣ ಬಿಡುತ್ತಾರೆ.

ಒಡಹುಟ್ಟಿದ ಅಣ್ಣ ಇದ್ದರೂ ಕಿತ್ತು ತಿನ್ನುವ ಬಡತನದಿಂದಾಗಿ ಉದರ ನಿಮಿತ್ತ ವೈದಿಕ ವೃತ್ತಿಯನ್ನು ಅವಲಂಬಿಸಿದ ರಾಘವೇಂದ್ರಾಚಾರ ಪರಸ್ಥಳದಲ್ಲಿಯೇ ಇರುತ್ತಿದ್ದಿದು ಹೆಚ್ಚು. ಹೀಗಾಗಿ ಅತ್ತಿಗೆಯ ಆಣತಿಯಲ್ಲಿ ಬೆಳೆಯುವ ಪ್ರಾರಬ್ಧ ವೆಂಕಣ್ಣನಿಗೆ. ಹೀಗಾಗಿ ವೆಂಕಣ್ಣ ಮನೆಗೆಲಸ ಮೊದಲ್ಗೊಂಡು ದನಗಾಯುವ ಕೆಲಸಕ್ಕೆ ಹಚ್ಚುತ್ತಿದ್ದರಿಂದ ವೆಂಕಣ್ಣನಿಗೆ ಶಿಕ್ಷಣವಿಲ್ಲದೆ ಬೆಳೆದ.

ಒಂದು ದಿನ ಬೇಸಿಗೆಯಲ್ಲಿ ಅತ್ತಿಗೆಗೆ ಮಜ್ಜಿಗೆಯನ್ನು ಕೇಳಿದ್ದೇ ಪ್ರಮಾದ ಎಂದಾಗಿದ್ದು ಅತ್ತಿಗೆಯಿಂದ ಬೈಯ್ಗುಳ ತಿಂದ ವೆಂಕಣ್ಣ ಮನೆಯಿಂದ ಹೊರಗೆ ಹೋಗುತ್ತಾನೆ. ಭವದ ಬದುಕು ರೋಸಿ ಹೋದಾಗ ಮೊರೆ ಹೋಗುವುದ ದೈವಕ್ಕಲ್ಲದೇ ಇನ್ನಲ್ಲಿಗೆ?



ದೈವೀ ಪ್ರೇರಣೆಯಂಬಂತೆ ಅತ್ತಿಗೆಯ ಕಾಟದಿಂದ ದೂರ ಹೋಗುವ ವಿಚಾರಗಳಿಂದಲೇ ಪ್ರಸನ್ನವೆಂಕಟದಾಸರು ತಿರುಪತಿಗೆ ಹೋಗಿ ಅಲ್ಲಿ ದೈವಿ ಸಾಕ್ಷಾತ್ಕಾರ ಪಡೆದರು. ಹಸಿವೆ ನೀರಡಿಕೆಗಳಿಂದ ಬಸವಳಿದು ಬೆಂಡಾದ ... ಸಂದರ್ಭವದು.

## ದಾಸರಿಗೆ ವೆಬ್‌ಸೈಟ್

ಹಿಮಾಲಯ ತಟದ ಹೃಷಿಕೇಶದಲ್ಲಿ ದಾಸರ ವಂಶಸ್ಥರಾಗಿರುವ ಬೆಂಗಳೂರಿನ ಡಿಆರ್‌ಡಿಓ ನಿವೃತ್ತ ಹಿರಿಯ ವಿಜ್ಞಾನಿ ಡಾ. ಸುಭಾಸ ಕಾಖಂಡಕಿ ಅವರು ನಾರದಭಕ್ತಿ ಸೂತ್ರದ ಉಪನ್ಯಾಸ ಕೇಳುತ್ತಿರುವ ಸಂದರ್ಭದಲ್ಲಿ ಅಲ್ಲಿನ ಋಷಿಯೊಬ್ಬರು ಈ ಪ್ರಸನ್ವೆಂಕಟದಾಸರನ್ನು ಉಲ್ಲೇಖಿಸಿದರಂತೆ ಅಷ್ಟೇ ಅಲ್ಲ; ದಾಸರ ಕೃತಿಗಳು ಆಂಗ್ಲ ಇಲ್ಲವೇ ಹಿಂದಿ ಭಾಷೆಯಲ್ಲಿ ಅನುವಾದಿಸಿ ಕೃತಿಗಳಿದ್ದರೆ ಕೊಡಿ ಎಂದು ಕೇಳಿದರಂತೆ. ಆದರೆ ಅವು ಲಭ್ಯವಿಲ್ಲದ ಕಾರಣದಿಂದ ಡಾ. ಸುಭಾಸ ಪತ್ನಿ ಕಾದಂಬರಿಕಾರ್ತಿ ರೇಖಾ ಕಾಖಂಡಕಿ ಶ್ರೀ ಪ್ರಸನ್ನವೆಂಕಟ ಕಲ್ಚರಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಹಾಗೂ ಪ್ರಸನ್ನವೆಂಕಟ ಪ್ರಕಾಶನವನ್ನು ಆರಂಭಿಸಿದ್ದಾರೆ. ಇವರ ಮಕ್ಕಳಾದ ಶಿಲ್ಪಾಕೌಸ್ತುಭ, ಕೋಕಿಲಾ ಶರತ್ ಅವರು **w.w.w.prasannavenktadasaru.org** ಅಂತರ್ಜಾಲ ತಾಣವನ್ನು ನಿರ್ಮಿಸಿದ್ದಾರೆ. ಈ ಮೂಲಕ ದಾಸರ ಕೃತಿಗಳು ಪರಿಚಯ ಮೊದಲಾದ ಸಾಹಿತ್ಯವನ್ನು ವಿಶ್ವಕ್ಕೆ ಪರಿಚಯ ಮಾಡಿಕೊಡುವ ಮಹತ್ವಾಕಾಂಕ್ಷೆಯ ಯೋಜನೆ ಸಿದ್ಧಪಡಿಸಿದ್ದು, ದಾಸರ ಆರಾಧನೆಯಲ್ಲಿ ದಿ. 18 ರಂದು ಬಾಗಲಕೋಟೆಯಲ್ಲಿ ಉದ್ಘಾಟನೆಗೊಳ್ಳಲಿದೆ. ರೇಖಾ ಕಾಖಂಡಕಿಯವರು ಬರೆದ 'ಶ್ರೀ ಪ್ರಸನ್ನ ವೆಂಕಟ ವಿಜಯ' ಕೃತಿಯೂ ಬಿಡುಗಡೆಯಾಗಲಿದೆ.

ತಿರುಪತಿಯ ಪುಷ್ಕರಣಿಯ ತಟದಲ್ಲಿ ಆರ್ತತೆಯಲ್ಲಿ ವೆಂಕಟೇಶನನ್ನು ಪ್ರಾರ್ಥಿಸಿದಾಗ ವೆಂಕಟೇಶ ಅನುಗ್ರಹಿಸಿ ವೆಂಕಣ್ಣನಿಗೆ ನಾಲಗೆಯಲ್ಲಿ 'ಪ್ರಸನ್ವೆಂಕಟ' ಎಂದು ಬರೆದಂತಾಯಿತಂತೆ.

ಅಲ್ಲಿಯೇ ಅಕ್ಷಯ ಪಾತ್ರೆ ಹಾಗೂ ಗೋಪಾಳ ಬುಟ್ಟಿ, ಉಪಾಸನಾ ಮೂರ್ತಿಗಳನ್ನು ಅನುಗ್ರಹವಾಗಿ ಪಡೆದು ಲೋಕ ಕಲ್ಯಾಣಕ್ಕಾಗಿ ಇಲ್ಲಿಂದ ಹೋಗುವಂತೆ ವೆಂಕಟೇಶನ ಅಪ್ಪಣೆಯಾಯಿತೆಂದು ಹೇಳಲಾಗುತ್ತದೆ. ಅಲ್ಲಿಂದ ಬಾಗಲಕೋಟೆ ಮನೆಗೆ ಬಂದು ನಂತರ ಮಧ್ವರ ಸರ್ವಮೂಲ ಗ್ರಂಥಗಳ ಅಧ್ಯಯನಕ್ಕಾಗಿ ಗಲಗಲಿಯ ಮುದ್ಗಲಾಚಾರ್ಯರ ಬಳಿ ಅಧ್ಯಯನ ಮಾಡುತ್ತಾರೆ. ಹರಿ ಸಂಕೀರ್ತನೆಗಳ ಮೂಲಕ ಬಾಗಲಕೋಟೆ ಸಂಕೀರ್ತನೆಯ ಮೂಲಕ ತುಳಸಿಗೇರಿಯ ಆಂಜನೇಯನ ಸನ್ನಿಧಾನದಲ್ಲಿಂತೇ ತಿರುಪತಿ ವೆಂಕಟೇಶನ ಸನ್ನಿಧಾನವಿದೆ ಎಂದು ದೈವಿ ಸಾಕ್ಷಾತ್ಕಾರವಾದಂತೆನಿಸಿ ತುಳಸಿಗಿರಿಯ ಆಂಜನೇಯನಲ್ಲಿ ವೆಂಕಟೇಶನನ್ನು ಕಾಣುತ್ತಾರೆ. ಉಪಾಸಿಸುತ್ತಾರೆ.

ತುಳಸಿಗಿರಿಯ ಆಂಜನೇಯನ ಅಂಗಾರವನ್ನೇ ಪ್ರಸಾದವಾಗಿ ನೀಡುತ್ತ ಪ್ರಸನ್ವೆಂಕಟದಾಸರು ಅಂಗಾರದಾಚಾರ್ಯರೆಂದೇ ಪ್ರಸಿದ್ಧಿ ಹೊಂದುತ್ತಾರೆ.

ಅಂತಿಮವಾಗಿ ಹರಿ ಧ್ಯಾನದಲ್ಲಿ ಕಳೆಯುತ್ತಿದ್ದ ದಾಸರಿಗೆ ಬದುಕಿನ ಸಂಜೆಯ ದಿನ ಭಾದ್ರಪದ ಏಕಾದಶಿಯಂದು ಲಯ ಚಿಂತನೆಯ ಧ್ಯಾನ ಮಗ್ನರಾದ ಸನ್ನಿವೇಶ. ಭಗವಂತನ ರೂಪ ಕಣ್ಣಾರೆ ಕಾಣುವ ಹಂಬಲ. ಬಾಲಕೃಷ್ಣನ ಗೆಜ್ಜೆನಾದ ಕೇಳಿದಂತಾಗಿ

**ದಾಸರು ಇಕ್ಕಿದ ಕದಗಳಾಕ್ಯಾವೆ...**
**ನಿದ್ರೆ ಉಕ್ಕೇರಿ ಕಣ್ಣು ಮುಚ್ಚ್ಯಾವೋ...**
**ತಕ್ಕೈಸುವಂತೆ ನೀ ಕಳ್ಳ...**

ದಾರೋ ಚಿಣ್ಣ ನೀ ದಾರೋ.... ಎಂದು ಭಗವಂತನ ಕೀರ್ತನೆ ಮಾಡುತ್ತಲೇ ಭಗವಂತನನ್ನು ಕಂಡು ಭವದ ಬದುಕನ್ನು ನೀಗಿಸುತ್ತಾರೆ.

ಪ್ರಸನ್ನ ವೆಂಕಟದಾಸರು ನೀಡಿದ ಕೀರ್ತನೆಗಳು ಕನ್ನಡ ಸಾರಸ್ವತ ಲೋಕದಲ್ಲಿ ದೇಶೀಯ ನೆಲೆಗಟ್ಟಿನ ವಿಶಿಷ್ಟತೆಯನ್ನು ಪಡೆದುಕೊಂಡಿವೆ. ದಾಸರ ಅನೇಕ ಕೀರ್ತನೆಗಳು ಹಾಗೂ ಮಹತ್ವದ ಕೃತಿಗಳಾದ ಪ್ರಸನ್ವೆಂಕಟ ಭಾಗವತ, ಸಮಸ್ತನಾಮ ಮಣಿ ಷಟ್ಚರಣ ಪದ್ಯ ಮಾಲಾ, ನಾರದ ಕೊರವಂಜಿ ವೇಷ ತಳೆದ ಚರಿತೆ, ನಾರಾಯಣ ಪಂಜರ, ಭ್ರಮರ ಗೀತೆ, ಸತ್ಯಾಭಾಮಾ ವಿಲಾಸ, ಇಂದಿಗೂ ದಾಸ ಸಾಹಿತ್ಯಕ್ಕೆ ನೀಡಿದ ಅನನ್ಯ ಕೊಡುಗೆಗಳಾಗಿವೆ.